**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 9 /2026**

**CW**-1

**PW**-1

| | |
|---|---|
| | **ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಸುಬ್ರಮಣಿ |
| **ತಂದೆಯ ಹೆಸರು** | ಸೆಲ್ವಂ |
| **ವಯಸ್ಸು** | 44 ವರ್ಷ |
| **ಉದ್ಯೋಗ** | ಅಟೋ ಚಾಲಕ |
| **ವಾಸಸ್ಥಳ** | ಅಶೋಕ ನಗರ ಕೆ ಜಿ ಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ನನಗೆ ಚಾಸಾ-2 ಮತ್ತು 3 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಅರೋಪಿ ಯಾರು ಎಂದು ಗೊತ್ತಿಲ್ಲ. ಅರೋಪಿಯನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ಅರೋಪಿಯು ನನ್ನ ಬಳಿ ಯವಾಗಲೂ ಸಹ ಹಣ ವಾಪಸ್ಸು ಕೊಡು ಎಂಬುದಾಗಿ ಕೇಳಿರುವುದಿಲ್ಲ. ಅದೇ ರೀತಿ ಅರೋಪಿಯು ನನ್ನ ಮೇಲೆ ಯಾವುದೇ ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಯಾವುದೇ ಚಾಕುವಿನಿಂದ ಹಲ್ಲೆ ನಡೆಸಿಲ್ಲ ಹಾಗೂ ಕೊಲೆ ಪ್ರಯತ್ನ ಮಾಡಿರುವುದಿಲ್ಲ.

ನನಗೆ ಈಗ ತೋರಿಸುತ್ತಿರುವ ಹೇಳಿಕೆ ದೂರಿನಲ್ಲಿರುವ ಸಹಿ ನನ್ನದು. ಸದರಿ ದೂರನ್ನು ನಿಪಿ.1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅಂದಾಜು 1 ವರ್ಷದ ಹಿಂದೆ ನಾನು ಕೆ ಜಿ ಎಪ್ ನಲ್ಲಿರುವ ಅಶೋಕ್ ನಗರ ಬಸ್ ನಿಲ್ದಾಣದಲ್ಲಿ ಇದ್ದಾಗ ಪೊಲೀಸರು ಅಲ್ಲಿಗೆ ಬಂದು ನಿಪಿ.1 ಹೇಳಿಕೆ ದೂರಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆದರೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಪೊಲೀಸರು ನಿಪಿ.1 ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಓದಿ ಹೇಳಿರುವುದಿಲ್ಲ.

ನನಗೆ ಈಗ ತೋರಿಸುತ್ತಿರುವ ಮರು ಹೇಳಿಕೆಯಲ್ಲಿರುವ ಸಹಿ ನನ್ನದು. ಸದರಿ ಮರು ಹೇಳಿಕೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.1 ಹೇಳಿಕೆ ದೂರಿಗೆ ಸಹಿ ಮಾಡುವ ಕಾಲಕ್ಕೆ ಪೊಲೀಸರು ನಿಪಿ.2 ಮರು ಹೇಳಿಕೆಗೆ ನನ್ನ ಸಹಿ ಪಡೆದಿರುತ್ತಾರೆ. ನಾನು ಘಟನೆಯ ಸಂಬಂಧ ಕೆ ಜಿ ಎಪ್ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆಗೆ ಹೋಗಿರಲಿಲ್ಲ ಮತ್ತು ಸದರಿ ಅಸ್ಪತ್ರೆಯಲ್ಲಿ ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ. ಪೊಲೀಸರು

ಸದರಿ ಅಸ್ಪತ್ರೆಯಲ್ಲಿ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಅ ರೀತಿ ಯಾವುದೇ ಮರು ಹೇಳಿಕೆ ಪಡೆದುಕೊಂಡಿಲ್ಲ. ನಿಪಿ.2 ಮರು ಹೇಳಿಕೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನನಗೆ ಈಗ ತೋರಿಸುತ್ತಿರುವ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದು. ಸದರಿ ಪಂಚನಾಮೆಯನ್ನು ನಿಪಿ.3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನಿಪಿ.1 ಹೇಳಿಕೆ ದೂರು ಹಾಗೂ ನಿಪಿ.2 ಮರು ಹೇಳಿಕೆಗೆ ಸಹಿ ಮಾಡುವ ಕಾಲಕ್ಕೆ ಅಶೋಕನಗರ ಬಸ್ ನಿಲ್ದಾಣದ ಬಳಿ ನಿಪಿ.3 ಪಂಚನಾಮೆಗೆ ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ನಾನು ರಕ್ತದ ಕಲೆಯುಳ್ಳ ಯಾವುದೇ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಅ ರೀತಿ ಯಾವುದೇ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಅದೇ ರೀತಿ ನಾನು ಊರಿಗಾಂ ಪೊಲೀಸ್ ಠಾಣೆಗೆ ಯವಾಗಲೂ ಸಹ ಹೋಗಿರಲಿಲ್ಲ ಮತ್ತು ಅ ರೀತಿ ಯಾವುದೇ ಷರಟು ಅಥವಾ ಪ್ಯಾಂಟನ್ನು ಪೊಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ. ನಿಪಿ.3 ಪಂಚನಾಮೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ದಿಃ 23-9-2025 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಕೆ ಜಿ ಎಪ್ ನ ಪಿಟ್ಟರ್ಸ್ ಬ್ಲಾಕ್ ನಲ್ಲಿರುವ ಅರೋಪಿಗೆ ಸೇರಿದ ಹೇರ್ ಕಟ್ಟಿಂಗ್ ಶಾಪ್ ಗೆ ಹೋದಾಗ ಅರೋಪಿಯು ನನ್ನನ್ನು ಕುರಿತು ನಾನು ಅರೋಪಿಗೆ ಕೊಡಬೇಕಾಗಿದ್ದ ರೂ. 5 ಸಾವಿರ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದು, ಆಗ ನಾನು ಅರೋಪಿಯನ್ನು ಕುರಿತ ಸ್ವಲ್ಪ ಕಾಲಾವಕಾಶ ಕೊಡುವಂತೆ ಮನವಿ ಮಾಡಿದಾಗ ಅರೋಪಿಯು ಒಮ್ಮೆಲೆ ನನ್ನ ಜೊತೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ನಂತರ ಅರೋಪಿಯು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಶೇವಿಂಗ್ ಮಾಡುವ ಕತ್ತಿಯಿಂದ ನನ್ನ ಗದ್ದದ ಮೇಲೆ ಹೊಡೆದು ಹಲ್ಲೆ ನಡೆಸಿ ರಕ್ತಗಾಯಪಡಿಸಿ ಕೊಲೆ ಮಾಡುವ ಪ್ರಯತ್ನ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನಗೆ ಅಗಿದ್ದ ಗಾಯಕ್ಕೆ ಕೆ ಜಿ ಎಪ್ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಊರಿಗಾಂ ಪೊಲೀಸರು ಸದರಿ ಅಸ್ಪತ್ರೆಗೆ ಬಂದು ನನ್ನನ್ನು ಘಟನೆಯ ಬಗ್ಗೆ ವೈದ್ಯರ ಸಮಕ್ಷಮ ವಿಚಾರಣೆ ಮಾಡಿದ್ದು, ನಾನು ಸದರಿ ಘಟನೆಯ ಬಗ್ಗೆ ವಿವರವಾಗಿ ಈಗ ನನಗೆ ಓದಿ ಹೇಳಿದ ರೀತ್ಯಾ ಪೊಲೀಸರ ಮುಂದೆ ನಿಪಿ.1 ರಂತೆ ಹೇಳಿಕೆ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಂತರ ಪೊಲೀಸರು ದಿಃ 4-10-2025 ರಂದು ನಾನು ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ ಪೊಲೀಸರು ಅಸ್ಪತ್ರೆಗೆ ಬಂದು ನನ್ನನ್ನು ಮರು ವಿಚಾರಣೆ ಮಾಡಿದಾಗ ನಾನು ಪೊಲೀಸರಿಗೆ ಈ ಹಿಂದೆ ಘಟನೆಯ ಬಗ್ಗೆ ಹೇಳಿಕೆ ಕೊಡುವಾಗ ನನಗೆ ಆಗಿದ್ದ ಗಾಯದ ನೋವಿನಿಂದ ಬಳಲುತ್ತ ಘಟನೆಯ ಬಗ್ಗೆ ಕೆಲವು ಮುಖ್ಯ ವಿಚಾರಗಳನ್ನು ತಿಳಿಸಿರುವುದಿಲ್ಲ ಎಂಬುವುದಾಗಿ ಸುಮಾರು 20 ವರ್ಷಗಳಿಂದ ಅರೋಪಿಗೆ ಕೊಡಬೇಕಾಗಿರುವ ಸಾಲದ ಹಣವನ್ನು ವಾಪಸ್ಸು ಕೊಟ್ಟಿಲ್ಲ ಎಂಬ

ಕಾರಣಕ್ಕಾಗಿ ಅರೋಪಿಯು ದಿಃ 23-9-2025 ರಂದು ಶೇವಿಂಗ್ ಮಾಡುವ ಕತ್ತಿಯಿಂದ ನನ್ನ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಲು ಪ್ರಯತ್ನಿಸಿದಾಗ ನಾನು ತಪ್ಪಿಸಿಕೊಂಡಾಗ ಸದರಿ ಕತ್ತಿಯ ಏಟು ನನ್ನ ಗಡ್ಡದ ಮೇಲೆ ಬಿದ್ದು ರಕ್ತಗಾಯವಾಗಿರುತ್ತದೆ - ಎಂಬುದಾಗಿ ಈಗ ನನಗೆ ಓದಿ ಹೇಳಿದ ರೀತ್ಯಾ ವೈದ್ಯರ ಸಮಕ್ಷಮ ನಿಪಿ.2 ರಂತೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಂತರ ದಿಃ 30-10-2025 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದು ನಾನು ಘಟನಾ ಸಮಯದಲ್ಲಿ ಧರಿಸಿದ್ದ ಖಾಕಿ ಬಣ್ಣದಿಂದ ಕೂಡಿದ ರಕ್ತದ ಕಲೆಗಳು ಅಂಟಿಕೊಂಡಿದ್ದ ಅರ್ದ ತೋಳಿನ ಷರಟು ಮತ್ತು ಖಾಕಿ ಪ್ಯಾಂಟ್ ಇವುಗಳನ್ನು ಠಾಣೆಯಲ್ಲಿ ಹಾಜರುಪಡಿಸಿದ್ದು, ಅ ಮೇರೆಗೆ ಪೊಲೀಸರು ಸದರಿ ಬಟ್ಟೆಗಳನ್ನು ನನ್ನ ಮತ್ತು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಅವುಗಳನ್ನು 2 ಪ್ರತ್ಯೇಕ ಬಿಳಿ ಬಣ್ಣದ ಬ್ಯಾಗ್ ಗಳಲ್ಲಿ ಹಾಕಿ ದಾರದಿಂದ ಹೊಲೆದು ಅವುಗಳ ಮೇಲೆ ಎಸ್ ಎಸ್ ಎಂಬ ಸೀಲಿನಿಂದ ಮೊಹರು ಮಾಡಿ ಅವುಗಳ ಮೇಲೆ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಸಂಜೆ 5-00 ರಿಂದ 5-45 ಗಂಟೆಯವರೆಗೆ ನಿಪಿ.3 ರಂತೆ ಅಮಾನತ್ತು ಪಂಚನಾಮೆ ಮಾಡಿ ವಿಷಯಗಳನ್ನು ಓದಿ ತಿಳಿಸಿ ನಂತರ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ನಿಪಿ.1 ರಂತೆ ಹೇಳಿಕೆ ದೂರು ಹಾಗೂ ನಿಪಿ.2 ರಂತೆ ಅಸ್ಪತ್ರೆಯಲ್ಲಿ ಪೊಲೀಸರ ಮುಂದೆ ಮರು ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಮತ್ತು ನನ್ನ ಸಮಕ್ಷಮ ಪೊಲೀಸರು ಠಾಣೆಯಲ್ಲಿ ನಿಪಿ.3 ರಂತೆ ಪಂಚನಾಮೆ ಮಾಡಿ ಘಟನಾ ಸಮಯದಲ್ಲಿ ನಾನು ಧರಿಸಿದ್ದ ಪ್ಯಾಂಟು ಮತ್ತು ಷರಟನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಈಗ ಅರೋಪಿಯ ಜೊತೆ ರಾಜೀ ಮಾಡಿಕೊಂಡು ಅತನನ್ನು ಶಿಕ್ಷೆಯಿಂದ ತಪ್ಪಿಸುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಅರೋಪಿ ಪರ ಶ್ರೀ ಡಿ.ಕೆ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ,

Sd/-

(**ಶಿವಕುಮಾರ.ಬಿ**)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 9 /2026**

**CW**–2

**PW**–2

| | |
|---|---|
| | **ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ರಾಮ್ |
| **ತಂದೆಯ ಹೆಸರು** | ಗುಣಶೇಖರ್ |
| **ವಯಸ್ಸು** | 41 ವರ್ಷ |
| **ಉದ್ಯೋಗ** | ಅಟೋ ಚಾಲಕ |
| **ವಾಸಸ್ಥಳ** | ಕೋರಮಂಡಲ್ ಕೆ ಜಿ ಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ನನಗೆ ಚಾಸಾ–1 ಮತ್ತು 3 ರವರು ಗೊತ್ತು. ಅದೇ ರೀತಿ ನ್ಯಾಯಾಲಯದ ಮುಂದಿರುವ ಅರೋಪಿ ಸಹ ಗೊತ್ತು. ಆದರೆ ಅರೋಪಿಯು ಚಾಸಾ–1 ರವರ ಮೇಲೆ ಹಣ ವಾಪಸ್ಸು ಕೊಡುವ ವಿಚಾರದಲ್ಲಿ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ–1 ರವರ ಮೇಲೆ ಹಲ್ಲೆ ನಡೆಸಿ ಕೊಲೆ ಪ್ರಯತ್ನ ಮಾಡಿದ್ದನ್ನು ನಾನು ಪ್ರತ್ಯಕ್ಷ ನೋಡಿಲ್ಲ. ಸದರಿ ಘಟನೆಯನ್ನು ನಾನು ಪ್ರತ್ಯಕ್ಷ ನೋಡಿರುವುದಾಗಿ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

ನನಗೆ ಈಗ ತೋರಿಸುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದು. ಸದರಿ ಪಂಚನಾಮೆಯನ್ನು ನಿಪಿ.4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಅಂದಾಜು 08 ತಿಂಗಳ ಹಿಂದೆ ನನಗೆ ಅನಾರೋಗ್ಯ ಇದ್ದ ಕಾರಣ ಕೆ ಜಿ ಎಪ್ ನ ಸಾರ್ವಜನಿಕ ಅಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದಾಗ ಪೊಲೀಸರು ಅಸ್ಪತ್ರೆಯಲ್ಲಿ ನಿಪಿ.4 ಪಂಚನಾಮೆಗೆ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರು ನನ್ನನ್ನು ಅರೋಪಿಗೆ ಸೇರಿದ ಫಿಟರ್ಸ್ ಬ್ಲಾಕ್ ನಲ್ಲಿರುವ ಶೇವಿಂಗ್ ಶಾಪ್ ಬಳಿ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಸದರಿ ಸ್ಥಳದಲ್ಲಿ ಅ ರೀತಿ ಯಾವುದೇ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.4 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ದಿಃ 23-9-2025 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಕೆ ಜಿ ಎಫ್ ನ ಅಶೋಕ ನಗರದ ಸಿ ಬ್ಲಾಕ್ ನ ಪಿಟ್ಟರ್ಸ್ ಬ್ಲಾಕ್ ನಲ್ಲಿರುವ ಅರೋಪಿಗೆ ಸೇರಿದ ಹೇರ್ ಕಟ್ಟಿಂಗ್ ಶಾಪ್ ಗೆ ಹೋಗಿ ಅಂಗಡಿಯ ಒಳಗೆ ಕುಳಿತ್ತಿದ್ದಾಗ ಚಾಸಾ-1 ರವರು ಅರೋಪಿಯ ಶೇವಿಂಗ್ ಶಾಪ್ ಗೆ ಬಂದಿದ್ದರು ಎಂದರೆ ಸರಿಯಲ್ಲ. ಅರೋಪಿ ಮತ್ತು ಚಾಸಾ-1 ಇಬ್ಬರು ಬಾಲ್ಯ ಸ್ನೇಹಿತರಾಗಿದ್ದು ಈಗ್ಗೆ ಸುಮಾರು 20 ವರ್ಷಗಳ ಹಿಂದೆ ಚಾಸಾ-1 ರವರು ಅರೋಪಿಯಿಂದ ರೂ. 5 ಸಾವಿರ ಗಳನ್ನು ಸಾಲ ಪಡೆದುಕೊಂಡಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಅರೋಪಿಯ ಸೆಲೂನ್ ಅಂಗಡಿಗೆ ಶೇವಿಂಗ್ ಮಾಡಿಸಿಕೊಳ್ಳಲು ಬಂದಾಗ ಅರೋಪಿಯು ಚಾಸಾ-1 ರವರನ್ನು ಕುರಿತು ತನಗೆ ಕೊಡಬೇಕಾಗಿದ್ದ ರೂ. 5 ಸಾವಿರ ಹಣವನ್ನು ಕೊಡುವಂತೆ ಕೇಳಿದಾಗ ಚಾಸಾ-1 ರವರು ಕೊಡುತ್ತೇನೆ ಇರು ಎಂದು ಹೇಳಿದಾಗ ಅರೋಪಿಯು ಕೋಪಗೊಂಡು ಚಾಸಾ-1 ರವರ ಮೇಲೆ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ತನ್ನ ಕೈಯಲ್ಲಿದ್ದ ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಕುತ್ತಿಗೆಯ ಮೇಲೆ ಕುಯ್ಯಲು ಪ್ರಯತ್ನಿಸಿದಾಗ ಚಾಸಾ-1 ರವರು ಅರೋಪಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ತನ್ನ ತಲೆಯನ್ನು ಕೆಳಗಡೆ ಬಗ್ಗಿಸಿದಾಗ ಸದರಿ ಶೇವಿಂಗ್ ಮಾಡುವ ಕತ್ತಿಯು ಚಾಸಾ-1 ರವರ ಗಡ್ಡದ ಮೇಲೆ ಕೊಯ್ದುಕೊಂಡು ರಕ್ತಗಾಯ ಉಂಟಾಯಿತು ಎಂದರೆ ಸರಿಯಲ್ಲ.

ಆಗ ಚಾಸಾ-1 ರವರು ಅರೋಪಿಯ ಕೈಯಿಂದ ತಪ್ಪಿಸಿಕೊಳ್ಳಲು ಕಿರುಚಾಡಿದಾಗ ಅಂಗಡಿಯಲ್ಲಿಯೇ ಇದ್ದ ನಾನು ಹಾಗೂ ಚಾಸಾ-3 ಸರವಣ ಇಬ್ಬರೂ ಜಗಳವನ್ನು ಬಿಡಿಸಿ ಗಾಯಗೊಂಡಿದ್ದ ಚಾಸಾ-1 ರವರನ್ನು ಒಂದು ಅಟೋದಲ್ಲಿ ಚಿಕಿತ್ಸೆಗಾಗಿ ಕೆ ಜಿ ಎಫ್ ನ ಸಾರ್ವಜನಿಕ ಅಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿಸಿರುತ್ತೇವೆಂದರೆ ಸರಿಯಲ್ಲ. ಅಸ್ಪತ್ರೆಯಲ್ಲಿ ಚಾಸಾ-1 ರವರು ಗಲಾಟೆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟು ಕೇಸು ದಾಖಲಾಗಿರುವ ವಿಚಾರ ನನಗೆ ತಿಳಿದಿದ್ದು, ಚಾಸಾ-1 ರವರು ಸುಮಾರು 20 ವರ್ಷಗಳಿಂದ ಅರೋಪಿಗೆ ಕೊಡಬೇಕಾಗಿದ್ದ ಸಾಲದ ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ ಎಂಬ ಕಾರಣಕ್ಕೆ ಅರೋಪಿಯು ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ-1 ರವರ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಲು ಪ್ರಯತ್ನಿಸಿದಾಗ ಚಾಸಾ-1 ರವರು ತಪ್ಪಿಸಿಕೊಂಡಾಗ ಸದರಿ ಕತ್ತಿಯ ಏಟು ಚಾಸಾ-1 ರವ ರ ಗಡ್ಡದ ಮೇಲೆ ಬಿದ್ದು ರಕ್ತಗಾಯವಾಗಿರುತ್ತದೆ - ಎಂಬುದಾಗಿ ಈಗ ನನಗೆ ಓದಿ ಹೇಳಿದ ರೀತ್ಯಾ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

ನಂತರ ದಿಃ 25-9-2025 ರಂದು ಊರಿಗಾಂ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದ್ದು ಅ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸದರಿ ಸ್ಥಳದಲ್ಲಿ ಬೆಳಿಗ್ಗೆ 11-30 ರಿಂದ ಮದ್ಯಾಹ್ನ 12-30 ರವರೆಗೆ ನನ್ನ ಸಮಕ್ಷಮ ನಿಪಿ.4 ರಂತೆ ಸ್ಥಳ ಪಂಚನಾಮೆ ಮಾಡಿ ಅರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಶೇವಿಂಗ್ ಮಾಡುವ ಕತ್ತಿಯನ್ನು ನಾನೇ ಪೊಲೀಸರಿಗೆ ಅಂಗಡಿಯನ್ನು

ಗುರುತಿಸಿ ಕೊಟ್ಟಿದ್ದು ಅದನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

ನಾನು ಸದರಿ ಘಟನೆಯನ್ನು ಪ್ರತ್ಯಕ್ಷ ನೋಡಿದ್ದರೂ, ಪೊಲೀಸರ ಮುಂದೆ ಘಟನೆಯ ಬಗ್ಗೆ ನಿಪಿ.5 ರಂತೆ ಹೇಳಿಕೆ ಕೊಟ್ಟಿದ್ದರೂ ಹಾಗೂ ನಿಪಿ. 4 ರಂತೆ ಪೊಲೀಸರು ಸ್ಥಳ ಪಂಚನಾಮೆ ಮಾಡಿ ಸದರಿ ಶೇವಿಂಗ್ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿದ್ದರೂ ಮತ್ತು ನಿಪಿ. 4 ರಲ್ಲಿ ಬರೆದಿರುವ ವಿಷಯಗಳು ನನಗೆ ಸಂಪೂರ್ಣ ಗೊತ್ತಿದ್ದರೂ ಈಗ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಅರೋಪಿ ಪರ ಶ್ರೀ ಡಿ.ಕೆ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ,

Sd/-

(**ಶಿವಕುಮಾರ.ಬಿ**)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 9 /2026**

**CW**–3

**PW**–3

| | |
|---|---|
| | **ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಶರವಣ |
| **ತಂದೆಯ ಹೆಸರು** | ಜಯಶಂಕರ್ |
| **ವಯಸ್ಸು** | 34 ವರ್ಷ |
| **ಉದ್ಯೋಗ** | ಅಟೋ ಚಾಲಕ |
| **ವಾಸಸ್ಥಳ** | ಅಶೋಕನಗರ, ಊರಿಗಾಂ, ಕೆ ಜಿ ಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ನನಗೆ ಚಾಸಾ–1 ಮತ್ತು 2 ರವರು ಗೊತ್ತು. ಅದೇ ರೀತಿ ನ್ಯಾಯಾಲಯದ ಮುಂದಿರುವ ಅರೋಪಿ ಯಾರು ಎಂದು ಗೊತ್ತಿಲ್ಲ. ನಾನು ಈ ಹಿಂದೆ ಅರೋಪಿಯನ್ನು ಎಲ್ಲಿಯೂ ನೋಡಿರುವುದಿಲ್ಲ. ಅರೋಪಿಯು ಚಾಸಾ–1 ರವರ ಮೇಲೆ ಹಣ ವಾಪಸ್ಸು ಕೊಡುವ ವಿಚಾರದಲ್ಲಿ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ–1 ರವರ ಮೇಲೆ ಹಲ್ಲೆ ನಡೆಸಿ ಕೊಲೆ ಪ್ರಯತ್ನ ಮಾಡಿದ್ದನ್ನು ನಾನು ಪ್ರತ್ಯಕ್ಷ ನೋಡಿಲ್ಲ. ಸದರಿ ಘಟನೆಯನ್ನು ನಾನು ಪ್ರತ್ಯಕ್ಷ ನೋಡಿರುವುದಾಗಿ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ದಿಃ 23–9–2025 ರಂದು ಸಂಜೆ 5–00 ಗಂಟೆ ಸಮಯದಲ್ಲಿ ಕೆ ಜಿ ಎಪ್ ನ ಅಶೋಕ ನಗರದ ಸಿ ಬ್ಲಾಕ್ ನ ಪಿಟ್ಟರ್ಸ್ ಬ್ಲಾಕ್ ನಲ್ಲಿರುವ ಅರೋಪಿಗೆ ಸೇರಿದ ಹೇರ್ ಕಟ್ಟಿಂಗ್ ಶಾಪ್ ಗೆ ಹೋಗಿ ಅಂಗಡಿಯ ಒಳಗೆ ಕುಳಿತ್ತಿದ್ದಾಗ ಚಾಸಾ–1 ರವರು ಅರೋಪಿಯ ಶೇವಿಂಗ್ ಶಾಪ್ ಗೆ ಬಂದಿದ್ದರು ಎಂದರೆ ಸರಿಯಲ್ಲ. ಅರೋಪಿ ಮತ್ತು ಚಾಸಾ–1 ಇಬ್ಬರು ಬಾಲ್ಯ ಸ್ನೇಹಿತರಾಗಿದ್ದು ಈಗ್ಗೆ ಸುಮಾರು 20 ವರ್ಷಗಳ ಹಿಂದೆ ಚಾಸಾ–1 ರವರು ಅರೋಪಿಯಿಂದ ರೂ. 5 ಸಾವಿರ ಗಳನ್ನು ಸಾಲ ಪಡೆದುಕೊಂಡಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಂತರ ಚಾಸಾ–1 ರವರು ಅರೋಪಿಯ ಸೆಲೂನ್ ಅಂಗಡಿಗೆ ಶೇವಿಂಗ್ ಮಾಡಿಸಿಕೊಳ್ಳಲು ಬಂದಾಗ ಅರೋಪಿಯು ಚಾಸಾ–1

ರವರನ್ನು ಕುರಿತು ತನಗೆ ಕೊಡಬೇಕಾಗಿದ್ದ ರೂ. 5 ಸಾವಿರ ಹಣವನ್ನು ಕೊಡುವಂತೆ ಕೇಳಿದಾಗ ಚಾಸಾ-1 ರವರು ಕೊಡುತ್ತೇನೆ ಇರು ಎಂದು ಹೇಳಿದಾಗ ಅರೋಪಿಯು ಕೋಪಗೊಂಡು ಚಾಸಾ-1 ರವರ ಮೇಲೆ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ತನ್ನ ಕೈಯಲ್ಲಿದ್ದ ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಕುತ್ತಿಗೆಯ ಮೇಲೆ ಕುಯ್ಯಲು ಪ್ರಯತ್ನಿಸಿದಾಗ ಚಾಸಾ-1 ರವರು ಅರೋಪಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ತನ್ನ ತಲೆಯನ್ನು ಕೆಳಗಡೆ ಬಗ್ಗಿಸಿದಾಗ ಸದರಿ ಶೇವಿಂಗ್ ಮಾಡುವ ಕತ್ತಿಯು ಚಾಸಾ-1 ರವರ ಗಡ್ಡದ ಮೇಲೆ ಕೊಯ್ದುಕೊಂಡು ರಕ್ತಗಾಯ ಉಂಟಾಯಿತು ಎಂದರೆ ಸರಿಯಲ್ಲ.

ಆಗ ಚಾಸಾ-1 ರವರು ಅರೋಪಿಯ ಕೈಯಿಂದ ತಪ್ಪಿಸಿಕೊಳ್ಳಲು ಕಿರುಚಾಡಿದಾಗ ಅಂಗಡಿಯಲ್ಲಿಯೇ ಇದ್ದ ನಾನು ಹಾಗೂ ಚಾಸಾ-2 ರಾಮ್ ಇಬ್ಬರೂ ಜಗಳವನ್ನು ಬಿಡಿಸಿ ಗಾಯಗೊಂಡಿದ್ದ ಚಾಸಾ-1 ರವರನ್ನು ಒಂದು ಅಟೋದಲ್ಲಿ ಚಿಕಿತ್ಸೆಗಾಗಿ ಕೆ ಜಿ ಎಪ್ ನ ಸಾರ್ವಜನಿಕ ಅಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿಸಿರುತ್ತೇವೆಂದರೆ ಸರಿಯಲ್ಲ. ಅಸ್ಪತ್ರೆಯಲ್ಲಿ ಚಾಸಾ-1 ರವರು ಗಲಾಟೆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟು ಕೇಸು ದಾಖಲಾಗಿರುವ ವಿಚಾರ ನನಗೆ ತಿಳಿದಿದ್ದು, ಚಾಸಾ-1 ರವರು ಸುಮಾರು 20 ವರ್ಷಗಳಿಂದ ಅರೋಪಿಗೆ ಕೊಡಬೇಕಾಗಿದ್ದ ಸಾಲದ ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ ಎಂಬ ಕಾರಣಕ್ಕೆ ಅರೋಪಿಯು ಶೇವಿಂಗ್ ಮಾಡುವ ಕತ್ತಿಯಿಂದ ಚಾಸಾ-1 ರವರ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಲು ಪ್ರಯತ್ನಿಸಿದಾಗ ಚಾಸಾ-1 ರವರು ತಪ್ಪಿಸಿಕೊಂಡಾಗ ಸದರಿ ಕತ್ತಿಯ ಏಟು ಚಾಸಾ-1 ರವ ರ ಗಡ್ಡದ ಮೇಲೆ ಬಿದ್ದು ರಕ್ತಗಾಯವಾಗಿರುತ್ತದೆ - ಎಂಬುದಾಗಿ ಈಗ ನನಗೆ ಓದಿ ಹೇಳಿದ ರೀತ್ಯಾ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.

ನಾನು ಸದರಿ ಘಟನೆಯನ್ನು ಪ್ರತ್ಯಕ್ಷ ನೋಡಿದ್ದರೂ, ಪೊಲೀಸರ ಮುಂದೆ ಘಟನೆಯ ಬಗ್ಗೆ ನಿಪಿ.6 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಅರೋಪಿ ಪರ ಶ್ರೀ ಡಿ.ಕೆ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ,

Sd/-

(**ಶಿವಕುಮಾರ.ಬಿ**)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 9 /2026**

**CW**–4

**PW**–4

| | |
|---|---|
| | **ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ರಾಜನ್ |
| **ತಂದೆಯ ಹೆಸರು** | ಚಂದರ್ |
| **ವಯಸ್ಸು** | 48 ವರ್ಷ |
| **ಉದ್ಯೋಗ** | ಪೈಂಟರ್ |
| **ವಾಸಸ್ಥಳ** | ಟ್ಯಾಂಕ್ ಬ್ಲಾಕ್, ಕೋರಮಂಗಲ,   ಕೆ ಜಿ ಎಫ್ |

**ಮುಖ್ಯ ವಿಚಾರಣೆಃ  ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ಈಗ ನನಗೆ ತೋರಿಸುತ್ತಿರುವ ಸ್ಥ,ಳ ಪಂಚನಾಮೆಯಲ್ಲಿರುವ ಸಹಿ ನನ್ನದು.  ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು.  ಅಂದಾಜು 01 ವರ್ಷದ ಹಿಂದೆ  ಕೆ ಜಿ ಎಫ್ ನಲ್ಲಿರುವ ಕೃಷ್ಣವರಂ ಬಸ್ ನಿಲ್ದಾಣದ ಬಳಿ ಪೊಲೀಸರು  ನಿಪಿ.4 ಪಂಚನಾಮೆಗೆ  ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆದರೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ  ಪೊಲೀಸರು ಸದರಿ ಮಹಜರ್ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.  ಪೊಲೀಸರು ನನ್ನನ್ನು ಅರೋಪಿಗೆ ಸೇರಿದ ಫಿಟರ್ಸ್ ಬ್ಲಾಕ್ ನಲ್ಲಿರುವ ಶೇವಿಂಗ್ ಶಾಪ್ ಬಳಿ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಸದರಿ ಸ್ಥಳದಲ್ಲಿ ಅ ರೀತಿ ಯಾವುದೇ ಪಂಚನಾಮೆ ಮಾಡಿಲ್ಲ.  ನನ್ನ ಸಮಕ್ಷಮ ಪೊಲೀಸರು ಯಾವುದೇ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.4 ಪಂಚನಾಮೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–**

ದಿಃ 25–9–2025 ರಂದು ಊರಿಗಾಂ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದ್ದು ಅ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ಚಾಸಾ–2 ರವರು  ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ನಂತರ ಪೊಲೀಸರು ಸದರಿ ಸ್ಥಳದಲ್ಲಿ  ಬೆಳಿಗ್ಗೆ 11–30 ರಿಂದ ಮದ್ಯಾಹ್ನ 12–30 ರವರೆಗೆ

ನನ್ನ ಸಮಕ್ಷಮ ನಿಪಿ.4 ರಂತೆ ಸ್ಥಳ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಅರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಶೇವಿಂಗ್ ಮಾಡುವ ಕತ್ತಿಯನ್ನು ಚಾಸಾ-2 ರವರು ಪೊಲೀಸರಿಗೆ ಅಂಗಡಿಯಲ್ಲಿ ಗುರುತಿಸಿ ಕೊಟ್ಟಿದ್ದು ಅದನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು, ಸದರಿ ಮಹಜರ್ ಜರುಗಿಸಿದ ಕ್ರಮದ ಬಗ್ಗೆ ಪೊಲೀಸರಿಗೆ ನನಗೆ ಈಗ ಓದಿ ಹೇಳಿದ ರೀತ್ಯಾ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಪೊಲೀಸರು ನಿಪಿ.4 ರಂತೆ ಮಹಜರ್ ಮಾಡಿ ಅರೋಪಿಯು ಕೃತ್ಯಕ್ಕೆ ಉಪಯೋಗಿಸಿದ್ದ ಶೇವಿಂಗ್ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿದ್ದರೂ ಹಾಗೂ ನಿಪಿ.7 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಅರೋಪಿ ಪರ ಶ್ರೀ ಡಿ.ಕೆ ವಕೀಲರಿಂದಃ-</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ,

Sd/-

(**ಶಿವಕುಮಾರ.ಬಿ**)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 9 /2026**

**CW**-5

**PW**-5

| | |
|---|---|
| | **ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಸ್ಟೀಪನ್ |
| **ತಂದೆಯ ಹೆಸರು** | ಪ್ರಭಾಕರ್ |
| **ವಯಸ್ಸು** | 32 ವರ್ಷ |
| **ಉದ್ಯೋಗ** | ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ |
| **ವಾಸಸ್ಥಳ** | ಟ್ಯಾಂಕ್ ಬ್ಲಾಕ್, ಕೋರಮಂಗಲ, ಕೆ ಜಿ ಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ಈಗ ನನಗೆ ತೋರಿಸುತ್ತಿರುವ ಸ್ಥ,ಳ ಪಂಚನಾಮೆಯಲ್ಲಿರುವ ಸಹಿ ನನ್ನದು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಅಂದಾಜು 06 ತಿಂಗಳ ಹಿಂದೆ ಕೆ ಜಿ ಎಪ್ ನಲ್ಲಿರುವ ಮಾರುಕಟ್ಟೆಯ ಬಳಿ ಪೊಲೀಸರು ನಿಪಿ.4 ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆದರೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಪೊಲೀಸರು ಸದರಿ ಮಹಜರ್ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಅರೋಪಿಗೆ ಸೇರಿದ ಫಿಟರ್ಸ್ ಬ್ಲಾಕ್ ನಲ್ಲಿರುವ ಶೇವಿಂಗ್ ಶಾಪ್ ಬಳಿ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಸದರಿ ಸ್ಥಳದಲ್ಲಿ ಅ ರೀತಿ ಯಾವುದೇ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.4 ಪಂಚನಾಮೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ದಿಃ 25-9-2025 ರಂದು ಊರಿಗಾಂ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದ್ದು ಅ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ಚಾಸಾ-2 ರವರು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ನಂತರ ಪೊಲೀಸರು ಸದರಿ ಸ್ಥಳದಲ್ಲಿ ಬೆಳಿಗ್ಗೆ 11-30 ರಿಂದ ಮಧ್ಯಾಹ್ನ 12-30 ರವರೆಗೆ

ನನ್ನ ಸಮಕ್ಷಮ ನಿಪಿ.4 ರಂತೆ ಸ್ಥಳ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಅರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಶೇವಿಂಗ್ ಮಾಡುವ ಕತ್ತಿಯನ್ನು ಚಾಸಾ-2 ರವರು ಪೊಲೀಸರಿಗೆ ಅಂಗಡಿಯಲ್ಲಿ ಗುರುತಿಸಿ ಕೊಟ್ಟಿದ್ದು ಅದನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು, ಸದರಿ ಮಹಜರ್ ಜರುಗಿಸಿದ ಕ್ರಮದ ಬಗ್ಗೆ ಪೊಲೀಸರಿಗೆ ನನಗೆ ಈಗ ಓದಿ ಹೇಳಿದ ರೀತ್ಯಾ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಪೊಲೀಸರು ನಿಪಿ.4 ರಂತೆ ಮಹಜರ್ ಮಾಡಿ ಅರೋಪಿಯು ಕೃತ್ಯಕ್ಕೆ ಉಪಯೋಗಿಸಿದ್ದ ಶೇವಿಂಗ್ ಕತ್ತಿಯನ್ನು ಅಮಾನತ್ತುಪಡಿಸಿಕೊಂಡಿದ್ದರೂ ಹಾಗೂ ನಿಪಿ.8 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಅರೋಪಿ ಪರ ಶ್ರೀ ಡಿ.ಕೆ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ,

sd/-

(**ಶಿವಕುಮಾರ.ಬಿ**)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)